# 23. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತರಲಘಟ್ಟ

**ಶಾಲೆಯ ಸಂಕ್ಷಿಪ್ತ ಮಾಹಿತಿ :-**

ಶಿಕಾರಿಪುರ ತಾಲ್ಲೂಕಿನ ಸ.ಹಿ.ಪ್ರಾ. ಶಾಲೆ ತರಲಘಟ್ಟ ಈ ಶಾಲೆಯು 1926 ನೇ ಇಸವಿಯಲ್ಲಿ ಪ್ರಾರಂಭಗೊಂಡಿದೆ. ಗ್ರಾಮಸ್ಥರು ಸ್ವ ಇಚ್ಛೆಯಿಂದ ಗ್ರಾಮದ ಮಧ್ಯ ಕೇವಲ ಒಂದು ಕೊಠಡಿಯನ್ನು ನಿರ್ಮಾಣ ಮಾಡಿ 1 ರಿಂದ 4ನೇ ತರಗತಿ ವರೆಗೆ ಶಾಲೆಯನ್ನು ಪ್ರಾರಂಭಮಾಡಲಾಯಿತು. 1960ನೇ ಇಸವಿಯ ನಂತರ ಗ್ರಾಮಠಾಣಾ ದಲ್ಲಿ ಗ್ರಾಮಸ್ಥರು ಸರ್ಕಾರದ ಸಹಾಯದಿಂದ ಕೊಠಡಿಗಳನ್ನು ನಿರ್ಮಾಣ ಮಾಡಿ 1ರಿಂದ 7ನೇ ತರಗತಿ ವರೆಗೆ ಪ್ರಾರಂಭ ಮಾಡಿದರು .ಒಬ್ಬ ಶಿಕ್ಷಕರಿಂದ ಪ್ರಾರಂಭವಾದ ಈ ಶಾಲೆಯು ಇದೀಗ 1ರಿಂದ 8ನೇ ತರಗತಿ ವರೆಗೆ ನಡೆಯುತ್ತಿದೆ. 105 ಮಕ್ಕಳು ವ್ಯಾಸಂಗ ಮಾಡುತಿದ್ದಾರೆ. ಹಾಗೂ 6 ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ.

ನಮ್ಮ ಶಾಲೆಯಲ್ಲಿ 1ರಿಂದ 8ನೇ ತರಗತಿಗಳು ನಡೆಯುತ್ತಿವೆ ಒಂದು RCC ಕೊಠಡಿಯ





ಮೇಲ್ಛಾವಣಿ ಸಂಪೂರ್ಣವಾಗಿ ನಾದುರಸ್ಥಾಗಿದೆ ದಿನಾಂಕ 25-07-2018 ರಂದು ಏಕಕಾಲಕ್ಕೆ ಕುಸಿದು ಬಿದ್ದಿರುತ್ತವೆ. ಅಂದಿನಿಂದ ಒಂದು ಕೊಠಡಿಯಲ್ಲಿ ನಲಿಕಲಿ ತರಗತಿಯನ್ನು ಹಾಗೂ ಒಂದು ಕೊಠಡಿಯಲ್ಲಿ 6,7,8 ನೇ ತರಗತಿ ಹಾಗೂ ಮುಖ್ಯೋಪಾಧ್ಯರ ಕೊಠಡಿಯಲ್ಲಿ 4,5 ನೇ ತರಗತಿಗಳನ್ನು ಪಾಠ ಬೋಧನೆಯಲ್ಲಿ ಯಾವುದೇ ವ್ಯತ್ಯಯವಿಲ್ಲದಂತೆ ನಡೆಸುತ್ತಿರುವುದು ಶಿಕ್ಷಕರ ಸಾಧನೆಯೇ ಸರಿಯಷ್ಠೆ.

**ನಲಿಕಲಿಮಾಹಿತಿ :-** ನಲಿಕಲಿ ತರಗತಿಯನ್ನು ಇಬ್ಬರು ಶಿಕ್ಷಕರು ನಿರ್ವಹಿಸುತ್ತಿದ್ದು ಮಕ್ಕಳ ಸಂಖ್ಯೆ **1** ನೇತರಗತಿಯಲ್ಲಿ 13, **2** ನೇ ತರಗತಿಯಲ್ಲಿ 15 3ನೇ ತರಗತಿಯಲ್ಲಿ 15 ಮಕ್ಕಳನ್ನು ಒಳಗೊಂಡಿರುತ್ತದೆ ಒಟ್ಟು

ನಲಿಕಲಿ ತರಗತಿಯು 43 ಮಕ್ಕಳನ್ನು ಒಳಗೊಂಡಿರುತ್ತದೆ . ನಲಿಕಲಿ ಕೊಠಡಿಯಲ್ಲಿ ಮಕ್ಕಳು ವಾಲ್ ಸ್ಲೇಟ್ ಅನ್ನು ಸಮರ್ಪಕವಾಗಿ ಬಳಸಲು ಮಕ್ಕಳ ಕಪ್ಪು ಹಲಗೆ ವ್ಯವಸ್ಥೆಯನ್ನು ಹೊಂದಿದೆ.

ನಲಿಕಲಿ ತರಗತಿಯಲ್ಲಿ ಮಕ್ಕಳಿಗಾಗಿ ಯೋಜಿಸಲಾದ ಪ್ರಕ್ರಿಯೆಗಳು:- **ನಲಿಕಲಿ ಪ್ರಾರ್ಥನೆ ,ಹವಮಾನ ನಕ್ಷೆ, ವಾಲ್ ಸ್ಲೇಟ್ , ಕಲಿಕಾ ಚಪ್ಪರ , ಪ್ರಗತಿ ನೋಟ್ , ಕಲಿಕಾ ಕಾರ್ಡ, ನಲಿಕಲಿ ಸ್ಟ್ಯಾಂಡ್ ,ಕಲಿಕಾ ತಟ್ಟೆ, ಅಭ್ಯಾಸ ಪುಸ್ತಕ, ಗುಂಪುತಟ್ಟೆ,ಕಲಿಕಾ ಸಾಮಗ್ರಿಗಳು ,ವಾಚಕಗಳು , ಶಿಕ್ಷಕರ ದಿನಚರಿ, ಪಪೆಟ್ ಶೋ,**

ಈ ಮೇಲಿನ ಎಲ್ಲಾ ಪ್ರಕ್ರಿಯೆಗಳನ್ನು ಕೊಠಡಿಯ ಸಮಸ್ಯೆ ಇದ್ದರು ಸಹ ಮಕ್ಕಳ ಕಲಿಕೆಯಲ್ಲಿ ಯಾವುದೇ ಕೊರತೆ ಆಗದಂತೆ ನಿರ್ವಹಿಸುವ ಶಿಕ್ಷಕರ ಬಗ್ಗೆ ಕ್ಲಸ್ಟರ್ ಮತ್ತು ಬ್ಯಾಕ್ ಹಂತದಲ್ಲು ಒಳ್ಳೆಯ ಅಭಿಪ್ರಾಯವಿದೆ .













ಅಡುಗೆ ಕೋಣೆ :-

ಒಂದು ದಾಸ್ತಾನುಕೊಠಡಿ ಮತ್ತು ಒಂದು ಅಡುಗೆ ಕೋಣೆ ಇದ್ದು ಅಡುಗೆ ಕೋಣೆಯನ್ನು ಬಣ್ಣದಿಂದ ಸಿಂಗರಿಸಲಾಗಿದೆ ಮೂವರು ಅಡುಗೆ ಸಿಬ್ಬಂದಿಯವರಿದ್ದು ಸ್ವಚ್ಛತೆ ಹಾಗೂ ರುಚಿಗೆ ಆದ್ಯತೆ ನೀಡುತ್ತಿದ್ದಾರೆ ಇವರ ಉತ್ತಮ ಕಾರ್ಯನಿರ್ವಹಣೆಯಿಂದ ಅಕ್ಷರ ದಾಸೋಹ ಬಿಸಿಯೂಟ ಯೋಜನೆಯು ಯಶಸ್ವಿಯಾಗಿ ನಡೆಯುತ್ತದೆ .ಅಕ್ಷರ ದಾಸೋಹ ಇಲಾಖೆಯ ನಿಯಮಗಳ ಮಾಹಿತಿ ಫಲಕದಲ್ಲಿ ಬರೆಸಲಾಗಿದೆ .ಮಕ್ಕಳಿಗೆ ಪ್ರತಿನಿತ್ಯ ನೀಡುವ ಆಹಾರ ಸಾಮಗ್ರಿಗಳ ಪ್ರಮಾಣವನ್ನು ಸಹ ಬರೆಸಲಾಗಿದೆ ಮಕ್ಕಳ ಸುರಕ್ಷತೆಗಾಗಿ 2 ಅಗ್ನಿ ನಂದಕಗಳನ್ನು ಅಳವಡಿಸಲಾಗಿದೆ.

## ಮುಖ್ಯೋಪಾಧ್ಯಯರ ಕೊಠಡಿ:-

ಶಾಲೆಗೆ ಸುಸಜ್ಜಿತವಾದಮುಖ್ಯೋಪಾಧ್ಯಯರ ಕೊಠಡಿ ಇದೆ. ವಿಶಾಲವಾದ ಪ್ರಶಾಂತ ಪರಿಸರದಲ್ಲಿ ಮುಖ್ಯ ಶಿಕ್ಷಕರು ಶಿಕ್ಷಕರೊಂದಿಗೆ ಚರ್ಚಿಸಿ ಸಮಾಲೋಚಿಸಿ ಸಭೆ ನಡೆಸುತ್ತಾರೆ.ಪ್ರತಿ ತಿಂಗಳ ಶಿಕ್ಷಕರ ಸಭೆ ನಡೆಸುವುದಲ್ಲದೆ ಶೈಕ್ಷಣಿಕ ಚಟುವಟಿಕೆಗಳನ್ನು ಯೋಜಿಸಲಾಗುತ್ತದೆ ಮುಖೋಪಾಧ್ಯಯರ ಕೊಠಡಿಯು ಗಾಳಿ ಬೆಳಕಿನ ವ್ಯವಸ್ಥೆಗೆ ಕಿಟಕಿ ಮುಖ್ಯ ಮಾಹಿತಿ ಫಲಕಗಳನ್ನು ಒಳಗೊಂಡಿದೆ.ಏಕಕಾಲದಲ್ಲಿ ಸುಮಾರು 25 ಸದ್ಯಸರು ಸಭೆಯಲ್ಲಿ ಪಾಲ್ಗೊಳ್ಳಬಹುದು.



**ಭೌತಿಕ ಸೌಲಭ್ಯಗಳು :-** 2012-13 ಮತ್ತು 2014-15 ನೇ ಸಾಲಿನಲ್ಲಿ ಶಾಲಾ ಮೈಧಾನ ಸಮತಟ್ಟು ಆಗಿದೆ 2013-14 ನೇ ಸಾಲಿನಲ್ಲಿ ಬೋರ್ ವೆಲ್ ವ್ಯವಸ್ಥೆ ಆಗಿರುತ್ತದೆ 2014-15 ನೇ ಸಾಲಿನಲ್ಲಿ ಅಡುಗೆ ಕೋಣೆ ದುರಸ್ಥಿ ಆಗಿರುತ್ತದೆ. 2016-17 ನೇ ಇಸವಿನಲ್ಲಿ ಗೇಟ್ ನಿರ್ಮಾಣ ,2017-18 ನೇ ಸಾಲಿನಲ್ಲಿ ಧ್ವಜಕಟ್ಟೆ ನಿರ್ಮಾಣ 2018-19 ನೇ ಸಾಲಿನಲ್ಲಿ ಕಾಂಪೌಂಡ್ ನಿರ್ಮಾಣ ವಾಗಿದ್ದು , ಇನ್ನು 50 ಮೀಟರ್ ಆಗಬೇಕಿದೆ. 2019-20 ರಲ್ಲಿ 6 ಬೀರುಗಳು 6 ಟೇಬಲ್ ಗಳು 6 ಕಬ್ಬಿಣದ ಸ್ಟ್ಯಾಂಡ್ ಗಳನ್ನು ಗ್ರಾಮಸ್ಥರು ದೇಣಿಗೆಯಾಗಿ ನೀಡಿರುತ್ತಾರೆ. ಪ್ರಸಕ್ತ ಸಾಲಿನಲ್ಲಿ 3 ಕೊಠಡಿಗಳು ನಿರ್ಮಾಣವಾಗುತ್ತಿವೆ.